**<u>ದಿನಾಂಕಃ 03.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟಿ ಸವಾಲುಃ ವಾದಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ</u>**

ನಾನು 5 ನೇ ತರಗತಿಯವರೆಗೆ ಓದಿರುತ್ತೇನೆ. ನಾನು 5 ನೇ ತರಗತಿಯನ್ನು ಎಷ್ಟನೇ ಇಸ್ವಿಯಲ್ಲಿ ಬಿಡಿಸಿದರು ಅಂದರೆ ನನಗೆ ಹೇಳಲು ಬರುವುದಿಲ್ಲ. ನನ್ನ ಆಧಾರ ಕಾರ್ಡ್ ಪ್ರಕಾರ ನನ್ನ ಜನ್ಮ ದಿನಾಂಕಃ 01.01.1958. ಆಧಾರ ಕಾರ್ಡ ಮಾಡಿಸಬೇಕಾದರೆ ನನ್ನ ಜನ್ಮ ದಿನಾಂಕವನ್ನು ದೃಢೀಕರಿಸಲು ಶಾಲಾ ದೃಢೀಕರಣ ಪತ್ರವನ್ನು ತೆಗೆದುಕೊಂಡು ಹೋಗಿರುತ್ತೇನೆ. ನಾನು ಪ್ರಬುದ್ಧಮಾನಕ್ಕೆ ಬರುವುದರೊಳಗೆ ಊರಲ್ಲಿ ಆದಂತಹ ಘಟನೆಗಳ ಬಗ್ಗೆ ಖುದ್ದು ಮಾಹಿತಿ ಇಲ್ಲ ಅಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆ ತಾಯಿಯಿಂದ ಕೇಳಿ ತಿಳಿದುಕೊಂಡಿರುತ್ತೇನೆ. ನಾನು ನ್ಯಾಯಾಲಯದಲ್ಲಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ತಂದೆ ತಾಯಿಯಿಂದ ಕೇಳಿ ತಿಳಿದುಕೊಂಡಿರುತ್ತೇನೆ ಎಂದು ನಮೂದಿಸಿರುವುದಿಲ್ಲ ಅಂದರೆ ಸರಿ. ಈ ಪ್ರಕರಣದ ಮೂಲ ವಾದಿಯಾದ ಕರಿಬಸಮ್ಮ ಇವರು 1929 ರಲ್ಲಿ ಜನಿಸಿದ್ದು, ಸುಮಾರು 1941 ನೇ ಇಸ್ವಿಯಲ್ಲಿ ಬಸವಣ್ಣಪ್ಪರವರೊಂದಿಗೆ ಮದುವೆ ಆಗಿತ್ತು ಅಂದರೆ ಇಲ್ಲ. ಬಸವಣ್ಣಪ್ಪ ಮತ್ತು ಕರಿಬಸಮ್ಮ ರವರ ದಾಂಪಾಂತ್ಯ ಜೀವನದಿಂದ ಸಂಗಮ್ಮ ಅಂದರೆ 1(ಎ) ರಿಂದ (ಐ) ರವರ ತಾಯಿ ಜನಿಸಿದ್ದಳು ಅಂದರೆ ನನಗೆ ಗೊತ್ತಿಲ್ಲ. ನಾನು ಪ್ರಬುದ್ಧಮಾನಕ್ಕೆ ಬಂದ ನಂತರ ಬಸವಣ್ಣಪ್ಪ ಬಂದಮ್ಮರವರೊಂದಿಗೆ ಸಂಸಾರ ಮಾಡಿದ್ದು ನಾನು ನೋಡಿರುತ್ತೇನೆ ಮತ್ತು ನನಗೆ ಗೊತ್ತು. ಕರಿಬಸಮ್ಮ ಅವರ ಮಗಳು ಸಂಗಮ್ಮ 12 ವರ್ಷ ಇರುವಾಗ

ಬಸವಣ್ಣಪ್ಪರವರು ಕರಿಬಸಮ್ಮ ಮತ್ತು ಸಂಗಮ್ಮ ರವರನ್ನು ಮನೆಯಿಂದ ಹೊರಗೆ ಹಾಕಿ ಬಂದಮ್ಮ ರವರ ಜೊತೆಗೆ ಸಂಸಾರ ಮಾಡುತ್ತಿದ್ದ ಅಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತಾಯಿ ಬಸವಣ್ಣಪ್ಪ ಮತ್ತು ಬಂದಮ್ಮ ರವರ ಮದುವೆ ಆಗಿದ್ದ ಬಗ್ಗೆ ಹೇಳುತ್ತಿದ್ದರು ಆದ್ದರಿಂದ ನಾನು ಸಾಕ್ಷ್ಯ ಹೇಳುತ್ತಿದ್ದೇನೆ. ಬಸವಣ್ಣಪ್ಪ ಕರಿಬಸಮ್ಮ ರವರನ್ನು ಮದುವೆ ಆಗಿದ್ದು, ಅವರ ಸಂಸಾರದಿಂದ ಸಂಗಮ್ಮರವರು ಜನಿಸಿದ್ದು ನಾನು ಹುಟ್ಟುವ ಪೂರ್ವದಲ್ಲಿ ನಡೆದ ಘಟನೆಯಾಗಿದ್ದರಿಂದ ಅದರ ಬಗ್ಗೆ ಮಾಹಿತಿ ಇಲ್ಲ ಅಂದರೆ ಸರಿ. ನಾನು ಪ್ರತಿವಾದಿಯವರ ದೂರದ ಸಂಬಂಧಿಕ ಅಂದರೆ ಸರಿ. ಆದ್ದರಿಂದ ಅವರ ಮಾತು ಕೇಳಿ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಬಸವಣ್ಣಪ್ಪ ಕರಿಬಸಮ್ಮ ರವರೊಂದಿಗೆ ಮೊದಲನ ಮದುವೆ ಆಗಿದ್ದ ವಿಷಯ ಗೊತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**